# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

**2ನೇ ಮತ್ತು 3ನೇ ಮಹಡಿ, ನಂ.16, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080,**

**ಇಮೇಲ್: karsec@gmail.com:080-22205189/93**


ಆದೇಶ ಸಂಖ್ಯೆ: **SECK/RLB/BELN(GP)1/2025, E-203219** ಬೆಂಗಳೂರು, ದಿನಾಂಕ

ದಿನಾಂಕ:**25-04-2025**

ಭಾರತ ಸಂವಿಧಾನ ಅನುಚ್ಛೇದ 243K ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308 ರಲ್ಲಿ ದತ್ತವಾಗಿರುವ ಅಧಿಕಾರದ ಮೇರೆಗೆ, ರಾಜ್ಯ ಚುನಾವಣಾ ಆಯೋಗವು ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ಖಾಲಿ ಇರುವ / ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆಯನ್ನು ನಡೆಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಎ ಮತ್ತು 308ಎಬಿ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು 1993ರ ನಿಯಮ 12ರನ್ವಯ ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಘೋಷಿಸಿದೆ.

ವಿವಿಧ ಕಾರಣಗಳಿಂದ ಖಾಲಿ ಇರುವ/ ತೆರವಾಗಿರುವ ಉಪ ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿಗಳ ಸದಸ್ಯ ಸ್ಥಾನಗಳ ಸಂಖ್ಯಾ ವಿವರಗಳನ್ನು ಲಗತ್ತಿಸಿರುವ **ಅನುಬಂಧ** ದಲ್ಲಿ ತೋರಿಸಲಾಗಿದೆ.

## ಚುನಾವಣಾ ವೇಳಾಪಟ್ಟಿ

| | | |
|---|---|---|
| 1 | ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆಯನ್ನು ಹೊರಡಿಸುವ ದಿನಾಂಕ ಮತ್ತು ದಿನ | 08.05.2025 (ಗುರುವಾರ) |
| 2 | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ | 14.5.2025 (ಬುಧವಾರ) |
| 3 | ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ | 15.5.2025 (ಗುರುವಾರ) |
| 4 | ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ | 17.5.2025 (ಶನಿವಾರ) |
| 5 | **ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಬೆಳಿಗ್ಗೆ 7-00 ಗಂಟೆಯಿಂದ ಸಂಜೆ 5-00 ಗಂಟೆಯವರೆಗೆ)** | **25.5.2025 (ಭಾನುವಾರ)** |
| 6 | ಮರು ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಬೆಳಿಗ್ಗೆ 7-00 ಗಂಟೆಯಿಂದ ಸಂಜೆ 5-00 ಗಂಟೆಯವರೆಗೆ) | 27.5.2025 (ಮಂಗಳವಾರ) |
| 7 | ಮತಗಳ ಎಣಿಕೆ ದಿನಾಂಕ ಮತ್ತು ದಿನ (ಬೆಳಿಗ್ಗೆ 8.00 ಗಂಟೆಯಿಂದ) (ತಾಲ್ಲೂಕು ಕೇಂದ್ರಗಳಲ್ಲಿ) | 28.5.2025 (ಬುಧವಾರ) |
| 8 | ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ | 28.5.2025 (ಬುಧವಾರ) |

ಜಿಲ್ಲಾಧಿಕಾರಿಗಳು, ಆಯೋಗವು ಆದೇಶಿಸಿರುವ ಮೇಲ್ಕಂಡ ಚುನಾವಣಾ ವೇಳಾಪಟ್ಟಿಯನ್ನು ಅನುಸರಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ನಿಯಮಗಳು, 1993ರ ನಿಯಮ 12ರ ಅಡಿಯಲ್ಲಿ ಚುನಾವಣಾ ಅಧಿಸೂಚನೆಯನ್ನು ಪ್ರಪತ್ರ-2 ರಲ್ಲಿ ಹೊರಡಿಸತಕ್ಕದ್ದು ಹಾಗೂ ಹೊರಡಿಸಲಾದ ಅಧಿಸೂಚನೆಯನ್ನು ಅದೇ ದಿನದಂದು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸತಕ್ಕದ್ದು. ಪ್ರಕಟಿಸಿದ ಅಧಿಸೂಚನೆ ಪ್ರತಿಗಳನ್ನು ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಕಛೇರಿಯ ಸೂಚನಾ ಫಲಕದ ಮೇಲೆ ಹಾಗೂ ಇನ್ನಿತರ ಮುಖ್ಯ ಸ್ಥಳಗಳಲ್ಲೂ ಸಹ ಪ್ರದರ್ಶಿಸತಕ್ಕದ್ದು ಹಾಗೂ ಆಯೋಗಕ್ಕೆ ಅಂದೇ ಇ-ಮೇಲ್ ಮುಖಾಂತರ ಕಳುಹಿಸುವುದು.

ಅಧಿಸೂಚನೆಯ ಪ್ರತಿಯನ್ನು ಅಂದೇ ಚುನಾವಣಾಧಿಕಾರಿಗಳಿಗೆ ಕಳುಹಿಸಿಕೊಟ್ಟು ಅದೇ ದಿನದಂದು ಚುನಾವಣಾಧಿಕಾರಿಗಳು ಪ್ರಪತ್ರ-3 ರಲ್ಲಿ ಚುನಾವಣಾ ನೋಟೀಸನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿ, ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸುವಂತೆ ಸೂಚಿಸುವುದು ಹಾಗೂ ಚುನಾವಣಾ ನೋಟೀಸಿನಲ್ಲಿ ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ಹೆಸರು, ಕ್ಷೇತ್ರದ ಹೆಸರು, ಸದಸ್ಯ ಸ್ಥಾನಗಳ ಸಂಖ್ಯೆ, ಮೀಸಲಾತಿ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುವಂತೆ ಸೂಚನೆಗಳನ್ನು ನೀಡತಕ್ಕದ್ದು.

**ದಿನಾಂಕ:10.5.2025 ರಂದು ಎರಡನೇ ಶನಿವಾರ ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆಯಡಿಯಲ್ಲಿ ಘೋಷಿಸಲ್ಪಟ್ಟ ಸಾರ್ವತ್ರಿಕ ರಜಾ ದಿನವಾಗಿರುವುದರಿಂದ ಸದರಿ ದಿನದಂದು ಯಾವುದೇ ನಾಮಪತ್ರವನ್ನು ಸ್ವೀಕರಿಸದಂತೆ ಚುನಾವಣಾಧಿಕಾರಿಗಳಿಗೆ ನಿರ್ದೇಶನ ನೀಡುವುದು.**

ಬೀದರ್ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಇ.ಸಿ.ಐ.ಎಲ್. ಹೈದರಾಬಾದ್ ರವರು ತಯಾರಿಸಿರುವ ಮಲ್ಟಿಚಾಯ್ಸ್ ವಿದ್ಯುನ್ಮಾನ ಮತ ಯಂತ್ರದ (E.V.M.) ಮೂಲಕ ಚುನಾವಣೆ ನಡೆಸಲು ಆದೇಶಿಸಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಸಿ ರಂತೆ **ಚುನಾವಣಾ ನೀತಿ ಸಂಹಿತೆಯು ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ದಿನಾಂಕ: 08.5.2025 ರಿಂದ ದಿನಾಂಕ: 28.5.2025** ರವರೆಗೆ ಜಾರಿಯಲ್ಲಿರುತ್ತದೆ.

ಗ್ರಾಮ ಪಂಚಾಯಿತಿಯ ಯಾವುದೇ ಕ್ಷೇತ್ರದಲ್ಲಿ ನಾಮಪತ್ರ ಸ್ವೀಕೃತವಾಗದೇ ಚುನಾವಣೆ ಪ್ರಕ್ರಿಯೆ ಮುಂದುವರೆಯಲಾಗದೆ ಇರುವಂತಹ ಗ್ರಾಮ ಪಂಚಾಯಿತಿಗಳಲ್ಲಿ ಹಾಗೂ ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ/ನಾಮಪತ್ರ ಹಿಂತೆಗೆತ ಇತ್ಯಾದಿ ಕಾರಣಗಳಿಂದ ಯಾವುದೇ ಅಭ್ಯರ್ಥಿಯು ಕಣದಲ್ಲಿರದೆ ಆ ಗ್ರಾಮ ಪಂಚಾಯಿತಿಯ ಯಾವುದೇ ಸ್ಥಾನಕ್ಕೂ ಚುನಾವಣೆ ನಡೆಯದೇ ಇದ್ದಲ್ಲಿ ಅಥವಾ ಗ್ರಾಮ ಪಂಚಾಯಿತಿಯಲ್ಲಿನ ಚುನಾವಣೆ ಘೋಷಿಸಿರುವ ಎಲ್ಲಾ ಸ್ಥಾನಗಳೂ ಅವಿರೋಧವಾಗಿ ಆಯ್ಕೆಯಾಗಿದ್ದು, ಆಯ್ಕೆಯಾದ ಅಭ್ಯರ್ಥಿಯ ಫಲಿತಾಂಶವನ್ನು ಚುನಾವಣಾಧಿಕಾರಿಯು ಘೋಷಿಸಿದ್ದಲ್ಲಿ, ಅಂತಹ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನೀತಿ ಸಂಹಿತೆ ಜಾರಿಯಲ್ಲಿರುವುದು ತಕ್ಷಣದಿಂದ ನಿಂತು ಹೋಗುತ್ತದೆ.

ಗ್ರಾಮ ಪಂಚಾಯಿತಿಯ ಯಾವುದೇ ಕ್ಷೇತ್ರದ ಸ್ಥಾನಕ್ಕೆ ಚುನಾವಣೆ ನಡೆಯುತ್ತಿದ್ದಲ್ಲಿ ಅಂತಹ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮೇಲೆ ತಿಳಿಸಿರುವ ಅವಧಿಯವರೆಗೆ ನೀತಿ ಸಂಹಿತೆಯು ಜಾರಿಯಲ್ಲಿರುತ್ತದೆ.

ಪ್ರಕರಣ 308-ಎಸಿ ರಂತೆ ಚುನಾವಣೆ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗಟ್ಟುವ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದು.

1. ಚುನಾವಣಾಧಿಕಾರಿಗಳು (ಆರ್.ಒ. ) ಚುನಾವಣೆ ನಡೆಯುವ **"ಅತಿಸೂಕ್ಷ್ಮ"** ಮತಗಟ್ಟೆಯಲ್ಲಿ ಚುನಾವಣಾ ಪ್ರಕ್ರಿಯೆಗಳ ವಿಡಿಯೋಗ್ರಾಫಿಕ್ ಚಿತ್ರೀಕರಣ ಮಾಡಿಸುವುದು.
2. ನೀತಿ ಸಂಹಿತೆಯು ಜಾರಿಯಲ್ಲಿರುವ ಪ್ರದೇಶಗಳಲ್ಲಿ **"ಮತದಾನವು ಮುಕ್ತಾಯಗೊಳ್ಳುವ ನಲವತ್ತೆಂಟು ಗಂಟೆಗಳ ಮೊದಲಿನ ಅವಧಿಯಲ್ಲಿ"** ಎಲ್ಲಾ ಮದ್ಯದ ಅಂಗಡಿಗಳನ್ನು ಮತ್ತು ಮದ್ಯ ತಯಾರಿಕಾ ಘಟಕಗಳನ್ನು ಅದರ ಮಾಲೀಕರು, ಅಧಿಭೋಗದಾರರು ಮತ್ತು ಸಂದರ್ಭಾನುಸಾರ ವ್ಯವಸ್ಥಾಪಕರು ಮುಚ್ಚತಕ್ಕದ್ದು ಹಾಗೂ ಮೊಹರು ಮಾಡಿ ಅದರ ಕೀ ಯನ್ನು ಜಿಲ್ಲಾಧಿಕಾರಿಗಳಿಗೆ ಅಥವಾ ಅಧಿಕಾರ ವ್ಯಾಪ್ತಿಯುಳ್ಳ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ರಿಗೆ ಒಪ್ಪಿಸತಕ್ಕದ್ದು.
3. ನೀತಿ ಸಂಹಿತೆ ಜಾರಿಯಲ್ಲಿರುವ ಅವಧಿಯಲ್ಲಿ ಯಾರಾದರೂ ಮದ್ಯವನ್ನು ಸ್ವಾಧೀನದಲ್ಲಿಟ್ಟು ಕೊಂಡಿರುವುದು ಅಥವಾ ಮದ್ಯವನ್ನು ಸೇವಿಸಿ ಬೀದಿಯಲ್ಲಿ ರಂಪಾಟ ಮಾಡುತ್ತಿರುವುದು ಕಂಡು ಬಂದರೆ ಮುನ್ನೆಚ್ಚರಿಕೆ ಕ್ರಮವಾಗಿ ಚುನಾವಣೆ ಮುಕ್ತಾಯವಾಗುವವರೆಗೆ ಅಂತಹವರನ್ನು ಕಸ್ಟಡಿಯಲ್ಲಿ ಇಡತಕ್ಕದ್ದು.
4. ಮೇಲ್ಕಂಡ ಪ್ರಕರಣದಂತೆ ಚುನಾವಣೆ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗಟ್ಟುವ ಬಗ್ಗೆ ಸೂಕ್ತ ತಂಡವನ್ನು ರಚಿಸಿ ಕ್ರಮಗಳನ್ನು ಕೈಗೊಳ್ಳುವುದು.

**ವಿಶೇಷ ಸೂಚನೆ :**

1. ಈಗಾಗಲೇ ನೀಡಿರುವ ನಿರ್ದೇಶನಗಳಂತೆ, ಚುನಾವಣೆ ನಡೆಯಲಿರುವ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ ಹಾಲಿ ಚಾಲ್ತಿಯಲ್ಲಿರುವ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ತಯಾರಿಸಲಾಗಿರುವ ಗ್ರಾಮ ಪಂಚಾಯತಿಯ ಮತದಾರರ ಪಟ್ಟಿಯಂತೆ ಚುನಾವಣೆ ನಡೆಸುವುದು.
2. ಚುನಾವಣೆ ನಡೆಸಲಾಗುವ ಗ್ರಾಮ ಪಂಚಾಯಿತಿಗೆ ಚುನಾವಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಕ ಮಾಡಿ ಅವರಿಗೆ ತರಬೇತಿಯನ್ನು ಹಾಗೂ ಚುನಾವಣೆಗೆ ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ ಹಾಗೂ ಸುತ್ತೋಲೆ/ನಿರ್ದೇಶನ ಪತ್ರಗಳ ಪ್ರತಿಯನ್ನು ನೀಡುವುದು.
3. ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ಗಮನಕ್ಕೆ ಬಂದಾಗ ಆಯೋಗದ **ಆದೇಶ ಸಂಖ್ಯೆ: ಎಸ್‌ಇಸಿ 10 ಎಂಐಎಸ್‌ಸಿ 2016, ದಿನಾಂಕ: 29.06.2016** ಹಾಗೂ ತಿದ್ದುಪಡಿ **ದಿನಾಂಕ: 06.07.2016** ರಂತೆ ಕ್ರಮ ವಹಿಸುವುದು.
4. ಚುನಾವಣೆ ನಡೆಸಲಾಗುತ್ತಿರುವ ಗ್ರಾಮ ಪಂಚಾಯಿತಿ ಸ್ಥಾನಗಳ ಬಗ್ಗೆ ಸಾರ್ವಜನಿಕರ ಮಾಹಿತಿಗಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಸುದ್ದಿಯಾಗಿ (ವೆಚ್ಚ ಬಾರದಂತೆ) ಪ್ರಕಟಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದು.
5. ಕಾಲ ಕಾಲಕ್ಕೆ ಚುನಾವಣೆಗೆ ಸಂಬಂಧಿಸಿದ ವರದಿಯನ್ನು ಆಯೋಗಕ್ಕೆ ಸಲ್ಲಿಸುವುದು.
6. ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ 248 ಇಜಿಪಿ 2015, ದಿನಾಂಕ: 19.03.2015 ರಂತೆ ಗ್ರಾಮ ಪಂಚಾಯಿತಿ ಚುನಾವಣೆಗಳ **ಮತಪತ್ರದಲ್ಲಿ "NOTA" ಅವಕಾಶ ಇರುವುದಿಲ್ಲ.**

ಆದೇಶಾನುಸಾರ

25/04/2025.

(ಪ್ರಕಾಶ್. ಎಸ್. ಮರಬಳ್ಳಿ)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

ರವರಿಗೆ,
ಎಲ್ಲಾ ಜಿಲ್ಲಾಧಿಕಾರಿಗಳು,

# ಅನುಬಂಧ

(SECK/RLB/BELN(GP)1/2025, E-203219 ದಿನಾಂಕ:25.4.2025ಕ್ಕೆ ಲಗತ್ತಿಸಲಾದುದು)

ವಿವಿಧ ಕಾರಣಗಳಿಂದ ತೆರವಾಗಿರುವ ಗ್ರಾಮ ಪಂಚಾಯತಿ ಖಾಲಿ ಸ್ಥಾನಗಳ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಸ್ಥಾನಗಳು |
|---|---|---|---|---|
| 1 | 2 | 3 | 4 | 5 |
| 1 | ಬೆಂಗಳೂರು ನಗರ | ಯಲಹಂಕ | ಗಂಟಿಗಾನಹಳ್ಳಿ | 1 |
| | | ಬೆಂಗಳೂರು ದಕ್ಷಿಣ | ಸೂಲಿಕೆರೆ | 1 |
| | | ಬೆಂಗಳೂರು ದಕ್ಷಿಣ | ಚನ್ನೇನಹಳ್ಳಿ | 1 |
| | | ಆನೇಕಲ್ | ಮರಸೂರು | 1 |
| | | ಆನೇಕಲ್ | ಶಾಂತಿಪುರ | 1 |
| | | ಆನೇಕಲ್ | ಮುಗಳೂರು | 1 |
| | ಒಟ್ಟು | 3 | 6 | 6 |
| 2 | ಬೆಂಗಳೂರು ಗ್ರಾಮಾಂತರ | ಹೊಸಕೋಟೆ | ಮುಗಬಾಳ | 1 |
| | ಒಟ್ಟು | 1 | 1 | 1 |
| 3 | ರಾಮನಗರ | ಕನಕಪುರ | ಹುಣಸನಹಳ್ಳಿ | 1 |
| | ಒಟ್ಟು | 1 | 1 | 1 |
| 4 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | ಅಂಗರೇಖನಹಳ್ಳಿ | 1 |
| | | ಗೌರಿಬಿದನೂರು | ನಕ್ಕಲಹಳ್ಳಿ | 1 |
| | | ಬಾಗೇಪಲ್ಲಿ | ಗೊರ್ತಪಲ್ಲಿ | 1 |
| | ಒಟ್ಟು | 3 | 3 | 3 |
| 5 | ಕೋಲಾರ | ಶ್ರೀನಿವಾಸಪುರ | ಕೋಡಿಪಲ್ಲಿ | 1 |
| | | ಶ್ರೀನಿವಾಸಪುರ | ಹೊದಲಿ | 1 |
| | | ಮುಳಬಾಗಿಲು | ಅಗರ | 1 |
| | | ಬಂಗಾರಪೇಟೆ | ಚೆನ್ನಕೋಟೆ | 1 |
| | | ಕೋಲಾರ | ಸೂಲೂರು | 1 |
| | | ಮಾಲೂರು | ಕೆ.ಜಿ ಹಳ್ಳಿ | 1 |
| | ಒಟ್ಟು | 5 | 6 | 6 |
| 6 | ತುಮಕೂರು | ತುಮಕೂರು | ಬೆಳಗುಂಬ | 1 |
| | | ತುಮಕೂರು | ಹೆಗ್ಗೆರೆ | 1 |
| | | ಗುಬ್ಬಿ | ಕುನ್ನಾಲ | 1 |
| | | ತಿಪಟೂರು | ಹಿಂಡಿಸ್ಕೆರೆ | 1 |
| | | ಚಿಕ್ಕನಾಯಕನಹಳ್ಳಿ | ಮುದ್ದೆನಹಳ್ಳಿ | 1 |
| | | ತುರುವೇಕೆರೆ | ಹುಲ್ಲೇಕೆರೆ | 1 |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಸ್ಥಾನಗಳು |
|---|---|---|---|---|
| | | ಮಧುಗಿರಿ | ದೊಡ್ಡವೀರಗೊಂಡನಹಳ್ಳಿ | 1 |
| | | ಮಧುಗಿರಿ | ಮರುವೇಕೆರೆ | 1 |
| | | ಮಧುಗಿರಿ | ಮುದ್ದೇನಹಳ್ಳಿ | 1 |
| | | ಪಾವಗಡ | ಕನ್ನಮೇಡಿ | 1 |
| | | ಪಾವಗಡ | ಬ್ಯಾಡನೂರು | 1 |
| | | ಪಾವಗಡ | ಅರಸೀಕೆರೆ | 1 |
| | | ಪಾವಗಡ | ಚನ್ನಕೇಶಪುರ | 1 |
| | ಒಟ್ಟು | 7 | 13 | 13 |
| 7 | ಚಿತ್ರದುರ್ಗ | ಮೊಳಕಾಲ್ಮೂರು | ಕೋನಸಾಗರ | 1 |
| | | ಮೊಳಕಾಲ್ಮೂರು | ಕೊಂಡ್ಲಹಳ್ಳಿ | 1 |
| | | ಚಿತ್ರದುರ್ಗ | ತುರುವನೂರು | 1 |
| | | ಚಿತ್ರದುರ್ಗ | ಗುಡ್ಡದರಂಗವ್ವನಹಳ್ಳಿ | 1 |
| | | ಚಿತ್ರದುರ್ಗ | ಮೆದೇಹಳ್ಳಿ | 1 |
| | | ಚಿತ್ರದುರ್ಗ | ಮಠದಕುರುಬರಹಟ್ಟಿ | 1 |
| | | ಹಿರಿಯೂರು | ಪಿ ಡಿ ಕೋಟೆ | 1 |
| | ಒಟ್ಟು | 3 | 7 | 7 |
| 8 | ದಾವಣಗೆರೆ | ದಾವಣಗೆರೆ | ಹದಡಿ | 1 |
| | | ದಾವಣಗೆರೆ | ಅತ್ತಿಗೆರೆ | 1 |
| | | ಜಗಳೂರು | ಮುಸ್ಟೂರು | 1 |
| | | ಹರಿಹರ | ಎಳೆಹೊಳೆ | 1 |
| | | ಹರಿಹರ | ಕೊಂಡಜ್ಜಿ | 6 |
| | ಒಟ್ಟು | 3 | 5 | 10 |
| 9 | ಶಿವಮೊಗ್ಗ | ಭದ್ರಾವತಿ | ದಾಸರಕಲ್ಲಹಳ್ಳಿ | 1 |
| | | ಶಿಕಾರಿಪುರ | ಅಂಬಾರಗೊಪ್ಪ | 1 |
| | | ಶಿಕಾರಿಪುರ | ಗುಡ್ಡದ ತುಮ್ಮಿನಕಟ್ಟೆ | 1 |
| | | ಶಿಕಾರಿಪುರ | ಸುಣ್ಣದಕೊಪ್ಪ | 1 |
| | | ಸೊರಬ | ಹೊಸಬಾಳೆ | 1 |
| | ಒಟ್ಟು | 3 | 5 | 5 |
| 10 | ಮೈಸೂರು | ಪಿರಿಯಾಪಟ್ಟಣ | ರಾಮನಾಥತುಂಗ | 1 |
| | | ನಂಜನಗೂಡು | ಸುತ್ತೂರು | 1 |
| | | ನಂಜನಗೂಡು | ಹೆಡಿಯಾಲ | 1 |
| | | ಮೈಸೂರು | ಮಾರ್ಬಳ್ಳಿ | 1 |
| | | ಟಿ.ನರಸೀಪುರ | ಮಲಿಯೂರು | 1 |
| | | ಕೆ.ಆರ್.ನಗರ | ಅಡಗೂರು | 1 |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಸ್ಥಾನಗಳು |
|---|---|---|---|---|
| | | ಕೆ.ಆರ್.ನಗರ | ಲಾಳಂದೇವನಹಳ್ಳಿ | 1 |
| | | ಹೆಚ್ ಡಿ ಕೋಟೆ | ಚಿಕ್ಕರೆಯೂರು | 1 |
| | ಒಟ್ಟು | 6 | 8 | 8 |
| 11 | ಚಾಮರಾಜನಗರ | ಚಾಮರಾಜನಗರ | ಕೆಂಪನಪುರ | 1 |
| | | ಗುಂಡ್ಲುಪೇಟೆ | ಸೋಮಹಳ್ಳಿ | 1 |
| | | ಯಳಂದೂರು | ಗೌಡಹಳ್ಳಿ | 1 |
| | | ಹನೂರು | ಪಿ.ಜಿ.ಪಾಳ್ಯ | 1 |
| | | ಹನೂರು | ಮಲೈ ಮಹದೇಶ್ವರ ಬೆಟ್ಟ | 1 |
| | ಒಟ್ಟು | 4 | 5 | 5 |
| 12 | ಹಾಸನ | ಅರಕಲಗೂಡು | ಹನ್ಯಾಳು | 1 |
| | | ಅರಸೀಕೆರೆ | ಬಂದೂರು | 1 |
| | | ಅರಸೀಕೆರೆ | ಲಾಳನಕೆರೆ | 1 |
| | | ಅರಸೀಕೆರೆ | ಮುದುಡಿ | 1 |
| | | ಬೇಲೂರು | ಹನಿಕೆ | 1 |
| | | ಚನ್ನರಾಯಪಟ್ಟಣ | ಕಾಂತರಾಜಪುರ | 1 |
| | | ಚನ್ನರಾಯಪಟ್ಟಣ | ನುಗ್ಗೇಹಳ್ಳಿ | 1 |
| | | ಹೊಳೆನರಸಿಪುರ | ಮೂಡಲಹಿಪ್ಪೆ | 1 |
| | | ಸಕಲೇಶಪುರ | ಹೆಗ್ಗದ್ದೆ | 1 |
| | | ಸಕಲೇಶಪುರ | ವಣಗೂರು | 1 |
| | ಒಟ್ಟು | 6 | 10 | 10 |
| 13 | ಮಂಡ್ಯ | ಮಂಡ್ಯ | ಮುತ್ತೇಗೆರೆ | 1 |
| | | ಮಂಡ್ಯ | ಮಾರಗೌಡನಹಳ್ಳಿ | 1 |
| | | ಮದ್ದೂರು | ನಿಲುವಾಗಿಲು | 1 |
| | | ಮದ್ದೂರು | ದೊಡ್ಡರಸಿನಕೆರೆ | 2 |
| | | ಮಳವಳ್ಳಿ | ಕುಂದೂರು | 1 |
| | | ಮಳವಳ್ಳಿ | ದಳವಾಯಿಕೋಡಿಹಳ್ಳಿ | 1 |
| | | ಮಳವಳ್ಳಿ | ಬ್ಯಾಡರಹಳ್ಳಿ | 1 |
| | | ಪಾಂಡವಪುರ | ಕನಗನಮರಡಿ | 1 |
| | | ಪಾಂಡವಪುರ | ಜಕ್ಕನಹಳ್ಳಿ | 1 |
| | | ಪಾಂಡವಪುರ | ಅರಳಕುಪ್ಪೆ | 1 |
| | | ಶ್ರೀರಂಗಪಟ್ಟಣ | ಬೆಳಗೊಳ | 1 |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಸ್ಥಾನಗಳು |
|---|---|---|---|---|
| | | ಶ್ರೀರಂಗಪಟ್ಟಣ | ಕಿರಂಗೂರು | 1 |
| | | ನಾಗಮಂಗಲ | ಚುಂಚನಹಳ್ಳಿ | 1 |
| | | ನಾಗಮಂಗಲ | ಗೊಂಡೇನಹಳ್ಳಿ | 1 |
| | | ಕೆ.ಆರ್ ಪೇಟೆ | ದಬ್ಬೇಘಟ್ಟ | 1 |
| | ಒಟ್ಟು | 7 | 15 | 16 |
| 14 | ಕೊಡಗು | ಪೊನ್ನಂಪೇಟೆ | ತಿತಿಮತಿ | 5 |
| | | ಮಡಿಕೇರಿ | ಎಮ್ಮೆಮಾಡು | 2 |
| | | ಮಡಿಕೇರಿ | ಕೆ ನಿಡುಗಡೆ | 2 |
| | | ಮಡಿಕೇರಿ | ಭಾಗಮಂಡಲ | 1 |
| | ಒಟ್ಟು | 2 | 4 | 10 |
| 15 | ಚಿಕ್ಕಮಗಳೂರು | ಕೊಪ್ಪ | ಅತ್ತಿಕೊಡಿಗೆ | 1 |
| | | ಕೊಪ್ಪ | ನುಗ್ಗಿ | 1 |
| | | ಅಜ್ಜಂಪುರ | ಸೊಕ್ಕೆ | 1 |
| | ಒಟ್ಟು | 2 | 3 | 3 |
| 16 | ದಕ್ಷಿಣ ಕನ್ನಡ | ಸುಳ್ಯ | ಕನಕಮಜಲು | 1 |
| | | ಬಂಟ್ವಾಳ | ಬಾಳ್ತಿಲ | 1 |
| | | ಬಂಟ್ವಾಳ | ವಿಟ್ಲಮುಡ್ನೂರು | 1 |
| | | ಬೆಳ್ತಂಗಡಿ | ಹೊಸಂಗಡಿ | 1 |
| | | ಬೆಳ್ತಂಗಡಿ | ಪುದುವೆಟ್ಟು | 1 |
| | | ಕಡಬ | ಸುಬ್ರಹ್ಮಣ್ಯ | 1 |
| | | ಮೂಡಬಿದಿರೆ | ಪುತ್ತಿಗೆ | 1 |
| | | ಉಳ್ಳಾಲ | ಕಿನ್ಯಾ | 1 |
| | | ಉಳ್ಳಾಲ | ಮುನ್ನೂರು | 1 |
| | ಒಟ್ಟು | 6 | 9 | 9 |
| 17 | ಉಡುಪಿ | ಉಡುಪಿ | ಉದ್ಯಾವರ | 1 |
| | | ಕಾಪು | ಬೆಳ್ಳೆ | 1 |
| | | ಕಾಪು | ಪಡುಬಿದ್ರೆ | 1 |
| | ಒಟ್ಟು | 2 | 3 | 3 |
| 18 | ಬೆಳಗಾವಿ | ಬೆಳಗಾವಿ | ಸುಳಗಾ(ಉ) | 1 |
| | | ಬೆಳಗಾವಿ | ಸಾಂಬ್ರಾ | 1 |
| | | ಬೆಳಗಾವಿ | ಕುದ್ರೆಮನಿ | 1 |
| | | ಖಾನಾಪುರ | ಬೈಲೂರ | 1 |
| | | ಖಾನಾಪುರ | ಗುಂಜಿ | 2 |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಸ್ಥಾನಗಳು |
|---|---|---|---|---|
| | | ಖಾನಾಪುರ | ರಾಮಗುರವಾಡಿ | 1 |
| | | ಚಿಕ್ಕೋಡಿ | ನಣದಿ | 1 |
| | | ಅಥಣಿ | ಕೋಹಳ್ಳಿ | 1 |
| | | ಅಥಣಿ | ಸಂಬರಗಿ | 1 |
| | | ಗೋಕಾಕ | ಹಿರೇನಂದಿ | 1 |
| | | ಬೈಲಹೊಂಗಲ | ನೇಸರಗಿ | 1 |
| | | ಸವದತ್ತಿ | ಚುಳಕಿ | 1 |
| | | ರಾಮದುರ್ಗ | ಮನಿಹಾಳ | 1 |
| | | ಹುಕ್ಕೇರಿ | ಕೋಚರಿ | 1 |
| | | ಹುಕ್ಕೇರಿ | ಯಮಕನಮರಡಿ | 1 |
| | | ಕಿತ್ತೂರ | ತಿಗಡೊಳ್ಳಿ | 1 |
| | ಒಟ್ಟು | 10 | 16 | 17 |
| 19 | ಬಾಗಲಕೋಟೆ | ಬಾದಾಮಿ | ಕೆಂದೂರ | 7 |
| | | ಬಾದಾಮಿ | ಕಾತರಕಿ | 1 |
| | | ಬಾದಾಮಿ | ನೀರಬೂದಿಹಾಳ | 1 |
| | | ಇಳಕಲ್ | ಬಲಕುಂದಿ | 1 |
| | | ಜಮಖಂಡಿ | ತುಂಗಳ | 1 |
| | | ಜಮಖಂಡಿ | ಖಾಜಿಬೀಳಗಿ | 1 |
| | | ಬಾಗಲಕೋಟೆ | ಕದಾಂಪೂರ | 1 |
| | | ಬಾಗಲಕೋಟೆ | ಚಿಕ್ಕಶಲ್ಲಿಕೇರಿ | 2 |
| | | ಬಾಗಲಕೋಟೆ | ಬೆಣ್ಣೂರ | 1 |
| | | ಮುಧೋಳ | ಬರಗಿ | 1 |
| | | ಮುಧೋಳ | ಸೋರಗಾಂವ | 1 |
| | | ಮುಧೋಳ | ಉತ್ತೂರ | 1 |
| | | ಮುಧೋಳ | ಮೆಟಗುಡ್ಡ | 1 |
| | ಒಟ್ಟು | 5 | 13 | 20 |
| 20 | ಧಾರವಾಡ | ನವಲಗುಂದ | ಯಮನೂರ | 8 |
| | | ನವಲಗುಂದ | ಶಿರಕೋಳ | 4 |
| | | ಧಾರವಾಡ | ಉಪ್ಪಿನಬೆಟಗೇರಿ | 1 |
| | | ಧಾರವಾಡ | ಶಿವಳ್ಳಿ | 1 |
| | | ಹುಬ್ಬಳ್ಳಿ | ಹಳ್ಯಾಳ | 1 |
| | | ಕಲಘಟಗಿ | ಕುರುವಿನಕೊಪ್ಪ | 1 |
| | | ಕಲಘಟಗಿ | ಸೂರಶೆಟ್ಟಿಕೊಪ್ಪ | 1 |
| | | ಕುಂದಗೋಳ | ಹಿರೇಹರಕುಣಿ | 1 |
| | ಒಟ್ಟು | 5 | 8 | 18 |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಸ್ಥಾನಗಳು |
|---|---|---|---|---|
| 21 | ವಿಜಯಪುರ | ನಿಡಗುಂದಿ | ವಂದಾಲ | 1 |
| | | ನಿಡಗುಂದಿ | ಯಲಗೂರ | 1 |
| | | ಚಡಚಣ | ನಿವರಗಿ | 1 |
| | | ತಾಳಿಕೋಟಿ | ಹಿರೂರ | 1 |
| | | ತಿಕೋಟಾ | ತಾಜಪೂರ-ಹೆಚ್ | 1 |
| | | ಆಲಮೇಲ | ಬಮ್ಮನಹಳ್ಳಿ | 1 |
| | | ಆಲಮೇಲ | ದೇವರ ನಾವದಗಿ | 1 |
| | | ಇಂಡಿ | ಭತಗುಣಕಿ | 1 |
| | | ಇಂಡಿ | ಲಚ್ಯಾಣ | 1 |
| | | ವಿಜಯಪುರ | ನಾಗಠಾಣ | 1 |
| | ಒಟ್ಟು | 7 | 10 | 10 |
| 22 | ಗದಗ | ಲಕ್ಷ್ಮೇಶ್ವರ | ಶಿಗ್ಲಿ | 1 |
| | | ಗಜೇಂದ್ರಗಡ | ನಿಡಗುಂದಿ | 1 |
| | | ಶಿರಹಟ್ಟಿ | ಕೋಗನೂರು | 1 |
| | ಒಟ್ಟು | 3 | 3 | 3 |
| 23 | ಹಾವೇರಿ | ಹಾನಗಲ್ಲ | ಚಿಕ್ಕಾಂಶಿ ಹೊಸೂರ | 1 |
| | | ರಟ್ಟಿಹಳ್ಳಿ | ಚಿಕ್ಕಯಡಚಿ | 1 |
| | | ಹಿರೇಕೆರೂರ | ತಾವರಗಿ | 1 |
| | | ಸವಣೂರ | ಕಾರಡಗಿ | 1 |
| | | ಸವಣೂರ | ಮಂತ್ರೋಡಿ | 1 |
| | ಒಟ್ಟು | 4 | 5 | 5 |
| 24 | ಉತ್ತರ ಕನ್ನಡ | ಜೋಯಿಡಾ | ಕಾತೇಲಿ (ಕುಂಬಾರವಾಡಾ) | 1 |
| | | ಕಾರವಾರ | ಅಮದಳ್ಳಿ | 1 |
| | | ಕಾರವಾರ | ಕಿನ್ನರ | 1 |
| | | ಮುಂಡಗೋಡ | ಹುನಗುಂದ | 1 |
| | | ಮುಂಡಗೋಡ | ಕಾತೂರ | 1 |
| | | ಸಿದ್ದಾಪುರ | ಬಿದ್ರಕಾನ | 1 |
| | | ಸಿದ್ದಾಪುರ | ಹಲಗೇರಿ | 1 |
| | ಒಟ್ಟು | 4 | 7 | 7 |
| 25 | ಕಲಬುರಗಿ | ಜೇವರ್ಗಿ | ಕೆಲ್ಲೂರ | 1 |
| | | ಜೇವರ್ಗಿ | ನರಿಬೋಳ | 1 |
| | | ಸೇಡಂ | ಅಡಕಿ | 1 |
| | | ಚಿಂಚೋಳಿ | ಶಾದಿಪೂರ | 1 |
| | | ಕಲಬುರಗಿ | ಭೂಪಾಲ ತೆಗನೂರು | 1 |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಸ್ಥಾನಗಳು |
|---|---|---|---|---|
| | | ಆಳಂದ | ಆಳಂಗಾ | 1 |
| | | ಆಳಂದ | ತಡೋಳಾ | 1 |
| | | ಆಳಂದ | ಹೊದಲೂರ | 1 |
| | | ಆಳಂದ | ತಡಕಲ | 1 |
| | | ಆಳಂದ | ಮೋಘಾ(ಕೆ) | 1 |
| | | ಆಳಂದ | ಭೂಸನೂರ | 1 |
| | | ಆಳಂದ | ಧಂಗಾಪೂರ | 1 |
| | | ಆಳಂದ | ಕೇರಿ ಅಂಬಲಗಾ | 1 |
| | | ಕಾಳಗಿ | ಕೋರವಾರ | 2 |
| | | ಕಮಲಾಪುರ | ವ್ಹಿ ಕೆ ಸಲಗರ | 1 |
| | | ಶಹಾಬಾದ | ಮರತೂರ | 2 |
| | | ಚಿತ್ತಾಪುರ | ಹಲಕಟ್ಟಾ | 1 |
| | | ಚಿತ್ತಾಪುರ | ದಂಡೋತಿ | 1 |
| | ಒಟ್ಟು | 9 | 18 | 20 |
| 26 | ಬೀದರ್ | ಬೀದರ | ಮರಕುಂದಾ | 1 |
| | | ಬೀದರ | ನಾಗೋರಾ | 1 |
| | | ಬೀದರ | ಬದಗಲ್ | 1 |
| | | ಬೀದರ | ಅಲಿಯಾಬಾದ(ಜೆ) | 1 |
| | | ಬಸವಕಲ್ಯಾಣ | ಹಾರಕೂಡ | 1 |
| | | ಭಾಲ್ಕಿ | ಮೇಹಕರ | 1 |
| | | ಭಾಲ್ಕಿ | ಕುರುಬಖೇಳಗಿ | 1 |
| | | ಔರಾದ(ಬಿ) | ಹೆಡಗಾಪೂರ | 1 |
| | | ಔರಾದ(ಬಿ) | ಏಕಂಬಾ | 4 |
| | | ಹುಮನಾಬಾದ್ | ಮದರಗಾಂವ | 1 |
| | | ಹುಮನಾಬಾದ್ | ನಂದಗಾಂವ | 7 |
| | ಒಟ್ಟು | 5 | 11 | 20 |
| 27 | ಬಳ್ಳಾರಿ | ಸಿರಗುಪ್ಪ | ಬಿ.ಎಂ. ಸೂಗೂರು | 2 |
| | | ಸಿರಗುಪ್ಪ | ರಾವಿಹಾಳು | 1 |
| | | ಕಂಪ್ಲಿ | ದೇವಲಪುರ | 1 |
| | | ಕಂಪ್ಲಿ | ದೇವಸಮುದ್ರ | 1 |
| | | ಸಂಡೂರು | ಮೆಟ್ರಿಕಿ | 1 |
| | ಒಟ್ಟು | 3 | 5 | 6 |
| 28 | ವಿಜಯನಗರ | ಹರಪನಹಳ್ಳಿ | ಕುಂಚೂರು | 1 |
| | | ಕೂಡ್ಲಿಗಿ | ಗುಂಡುಮುಣುಗು | 1 |
| | | ಹಡಗಲಿ | ಇಟ್ಟಗಿ | 1 |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಒಟ್ಟು ಸ್ಥಾನಗಳು |
|---|---|---|---|---|
| | | ಹಗರಿಬೊಮ್ಮನಹಳ್ಳಿ | ಮಾಲವಿ | 1 |
| | | ಹಗರಿಬೊಮ್ಮನಹಳ್ಳಿ | ಬಾಚಿಗೊಂಡನಹಳ್ಳಿ | 1 |
| | ಒಟ್ಟು | 4 | 5 | 5 |
| 29 | ರಾಯಚೂರು | ರಾಯಚೂರು | ತಲಮಾರಿ | 1 |
| | | ರಾಯಚೂರು | ಜಂಬಲದಿನ್ನಿ | 1 |
| | | ಮಾನವಿ | ಸಂಗಾಪೂರು | 1 |
| | | ಲಿಂಗಸೂಗೂರು | ದೇವರಭೂಪೂರ-5 | 1 |
| | | ಲಿಂಗಸೂಗೂರು | ರೋಡಲಬಂಡಾ(ಯು.ಕೆ.ಪಿ) | 1 |
| | | ಸಿಂಧನೂರು | ವಿರುಪಾಪುರ | 1 |
| | | ಮಸ್ಕಿ | ಅಮೀನಗಡ | 1 |
| | ಒಟ್ಟು | 5 | 7 | 7 |
| 30 | ಕೊಪ್ಪಳ | ಕುಷ್ಟಗಿ | ಜಾಗೀರಗುಡದೂರ | 1 |
| | | ಕುಷ್ಟಗಿ | ಹನುಮಸಾಗರ | 1 |
| | | ಕುಷ್ಟಗಿ | ಸಂಗನಾಳ | 1 |
| | | ಕುಷ್ಟಗಿ | ಗುಮಗೇರಾ | 1 |
| | | ಕೊಪ್ಪಳ | ಕವಲೂರು | 1 |
| | | ಯಲಬುರ್ಗಾ | ಹಿರೇಅರಳಿಹಳ್ಳಿ | 1 |
| | | ಯಲಬುರ್ಗಾ | ಗಾಣದಾಳ | 1 |
| | | ಗಂಗಾವತಿ | ಚಿಕ್ಕಬೆಣಕಲ್ | 1 |
| | ಒಟ್ಟು | 4 | 8 | 8 |
| 31 | ಯಾದಗಿರಿ | ಶಹಾಪುರ | ಚಾಮನಾಳ | 1 |
| | | ಶೋರಾಪುರ | ಸೂಗೂರು | 1 |
| | | ವಡಾಗೇರಾ | ನಾಯ್ಕಲ್ | 1 |
| | ಒಟ್ಟು | 3 | 3 | 3 |
| | ಅಂತೂ ಒಟ್ಟು | 135 | 223 | 265 |

25/04/2025.

(ಪ್ರಕಾಶ್. ಎಸ್. ಮರಬಳ್ಳಿ)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.